# ಶಾಸನಗಳಲ್ಲಿ ಕಲ್ಯಾಣಿ ಚಾಳುಕ್ಯರ ಕಾಲದ ಜೈನಾಚಾರ್ಯರು

ಚಾಳುಕ್ಯರ ಕಾಲದಲ್ಲಿ ವಿಖ್ಯಾತನಾಮರಾದ ನೂರಾರು ಜನ ಜೈನಾಚಾರ್ಯರು ಶಾಸನೋಕ್ತರಾಗಿದ್ದಾರೆ. ಇವರಲ್ಲಿ ಕೆಲವರ ವಿಚಾರವಾಗಿ, ಹಲವು ಪುಟ್ಟಗಟ್ಟಲೆ ಬರೆಯುವಷ್ಟು ವಿಪುಲವಾದ ಶಾಸನ ಸಾಮಗ್ರಿ ಸಹ ಉಪಲಬ್ಧವಿದೆ: ಇದು ಒಂದು ಪಿಎಚ್‌ಡಿ ಮಹಾಪ್ರಬಂಧಕ್ಕೆ ತಕ್ಕ ಸಾಮಗ್ರಿಯೂ ಆಗಿದೆ. ವಿಸ್ತಾರವಾದ ವಿಷಯ ಸಂಪತ್ತನ್ನು ಕೇವಲ ದಿಗ್ದರ್ಶನ ರೂಪದಲ್ಲಿ ಒಂದು ಹಕ್ಕಿನೋಟವನ್ನು ಈ ಸಂಪ್ರಂಬಂಧದಲ್ಲಿ ಬೀರಲಾಗಿದೆ.

ಜೈನ ಮುನಿಗಳು ಬಹುಶಾಸ್ತ್ರ ವಿಶಾರದರು. ತರ್ಕಶಾಸ್ತ್ರದಲ್ಲಿ ನಿಪುಣರೆಂಬುದನ್ನು ನಯಸೇನ ನಯಣಂದ್ಯೆ ಮೊದಲಾದವರ ತರ್ಕನೈಪುಣ್ಯಕ್ಕೆ ಒತ್ತಿಕೊಟ್ಟು ಹೇಳುವುದರ ಮೂಲಕ ಶಾಸನ ಕವಿಗಳು ಸೂಚಿಸಿದ್ದಾರೆ. ಸುಮಾರು ಎರಡು ಸಾವಿರ ವರ್ಷಗಳಿಂದ ರೂಢಿಯಲ್ಲಿರುವ ಜೈನಪರಂಪರೆಯ ವ್ಯಾಕರಣ ಶಾಖೆಯನ್ನು ಸೂರಿಗಳು ಗುರುತಿಸಿದ್ದಾರೆ. ಚಾಳುಕ್ಯರ ಕಾಲದ ಜೈನ ಮುನಿಗಳಲ್ಲೂ ಕೆಲವರು ಉನ್ನತ ಮಟ್ಟಡ್ಡ ವೈಯಾಕರಣರಿದ್ದರು. ಚಾಳುಕ್ಯರ ಕಾಲದ ಹಲವಾರು ಶಾಸನಗಳು ಅಂತಹ ವ್ಯಾಕರಣ ಶಾಸ್ತ್ರ ಪಾರಗರನ್ನು ಹೆಸರಿಸಿವೆ. ಕೀರ್ತಿಸಿವೆ. ಗುಣಕೀರ್ತಿ ಸಿದ್ಧಾಂತ ಭಟ್ಟಾರಕ, ತ್ರೈವಿದ್ಯಗೋವರ್ಧನ–ಆದಿಯಾಗಿ ಹತ್ತಾರುಜನ ರಿಷಿ ಕಂತಿಯರ ಹೊಂದಿದ್ದ ನಾನಾ ಜ್ಞಾನ ಶಾಖೆಗಳ ಪರಿಣಸಿಯನ್ನು ಶಾಸನಕಾರರು ಸ್ಮರಿಸಿದ್ದಾರೆ.

ಜೈನಯತಿಗಳ ಚಾರಿತ್ರ್ಯವನ್ನು ಬಿಂಬಿಸುವ ಗುಣ ವಿಶೇಷಣಗಳು, ಉದಾತ್ತ ಆಚಾರ ಇವು ಲೋಕಕ್ಕೆ ಆದರ್ಶಪ್ರಾಯವೆನಿಸಿದ್ದುವು. ಜೈನ ಆಚಾರ್ಯರ ಜನಪರ ಚಿಂತನೆಗಳನ್ನು ಹರಾಳುಗೊಳಿಸಿ ತೋರಿಸಿರುವ ಶಸನಗಳೂ ಇವೆ. ನಯಕೀರ್ತಿ ಸಿದ್ಧಾಂತದೇವ ಮತ್ತು ಆತನ ಶಿಷ್ಯ ಮುನಿಗಳು, ಜನತೆಗೆ ನೀರು ಸರಿಯಾಗಿಯೂ ಸುಲಭವಾಗಿಯೂ ಸಿಗಬೇಕೇಂಬ ಇರಾದೆಯಿಂದ, ಊರಿಗೊಂದು

ಕೆರೆ ಕಟ್ಟಿಸಿಕೊಡು ವಂತೆ ಶಿಷ್ಯರಿಗೆ ಉಪದೇಶಿಸುತ್ತದ್ದರು. 'ಅವರ ಹೇಳ್ಕೆಯಿಂದ' ಸಿಂಗ ಸಮುದ್ರವೆಂಬ ಕೆರೆಯನ್ನೂ ಅದಕ್ಕೊಂದು ಕಲ್ಲಿನ ತೂಬನ್ನೂ ಮಾಡಿಸಿದರೆಂದು ಒಂದು ಶಾಸನ ನಮೂದಿಸಿದೆ [ಎ.ಕ. ೨(ರ). ಜ೬ಳ. ಅತೇದಿ. ಬೆಕ್ಕ (ಹಾಜಿ/ಚ.ಪ.ತಾ)ಪು.ಖಳಜ]

ಜೈನಸಿದ್ಧಾಂತಕ್ಕೆ ಇರುವ ಇನ್ನೊಂದು ಹೆಸರು ಸ್ಯಾದ್ವಾದ ಸಿದ್ಧಾಂತ. ಇದನ್ನು ಅನೇಕಾಂತವಾದ, ಸಪ್ತಂಭಂಗಿ ನ್ಯಾಯ ಎಂದೂ ಕರೆಯಾಗಿದೆ. ಇದರಲ್ಲಿ ಅಡಗಿರುವ ವಿವೇಕವೆಂದರೆ, ಅನ್ಯವ್ಯಕ್ತಿಗಳ ಮತ್ತು ಅನ್ಯಧರ್ಮಗಳ ದೃಷ್ಟಿಕೋನವನ್ನು ಸಹನೆ ಯಿಂದ ಅರಿಯುವ, ಆಲಿಸುವ, ಮನ್ನಿಸುವ, ಸಹಿಷ್ಣು ಮನೋಧರ್ಮವನ್ನು ಒಪ್ಪಿಕೊಂಡಿರುವುದು.

ಚಾಳುಕ್ಯರ ಕಾಲದ ಜೈನಾಚಾರ್ಯರೂ ಸಹ, ಪ್ರಾಚೀನ ಪರಂಪರೆಗೆ ಅನುಗುಣವಾಗಿ, ಅನ್ಯಧರ್ಮಗಳ ತತ್ವಗಳನ್ನು ಅಭ್ಯಸಿಸಿ. ಪಾಂಡಿತ್ಯಗಳಿಸಿದ್ದರು. ಪರಧರ್ಮ ಸಹಿಷ್ಣುತೆ ಅಹಿಂಸೆಯಲ್ಲಿ ಹಾಸು ಹೊಕ್ಕಾಗಿ ಸೇರಿಹೋಗಿದೆ: ಕಸವರಮೆಂಬುದು (ಬಂಗಾರ) ನೆರೆ ಸೈರಿಸಲಾರ್ಪೊಡೆ ಪರಧರ್ಮಮುಮಂ ಪರರ ವಿಚಾರಮುಮಂ ಎಂಬುದು ಜೈನನಾದ ಶ್ರೀವಿಜಯ ಕವಿಯ ಉಕ್ತಿ ಮುಕ್ತಾಫಲ, ಅದು ಅವನ ಸ್ವಧರ್ಮದತ್ತ ಚಿತ್ತ ಸಂಸ್ಕಾರದ ಒಳ್ನುಡಿ. ಇಂತಹ ಸೂತ್ರಗಳ, ಸೂಕ್ತಿಗಳ ಲಕ್ಷಣಕ್ಕೆ ಲಕ್ಷ್ಯವಾದ ಜೈನಾಚಾರ್ಯರು, ಕಲ್ಯಾಣ ಚಾಳುಕ್ಯ ಸಾಮ್ರಾಜ್ಯದ ಉದ್ದಗಲಗಳಲ್ಲಿ ವಿರಾಜಮಾನರಾಗಿದ್ದರು. ಅವರು ಹೊಂದಿದ್ದ ಸಮನ್ವಯ ಸಮ್ಯಗ್ ದೃಷ್ಟಿಯನ್ನು, ಗಂಟೆ ಬಾರಿಸಿದಂತೆ ಢಣಾಡಂಗುರವಾಗಿ ಸಾರುವ ಶಾಸನಗಳಿವೆ. ಭಾರತೀಯ ಜೀವನ ಸಂಸ್ಕೃತಿಗಳ ವಿಕಾಸಕ್ಕೆ ಈ ಸಮಣ ಸಮುದಾಯದ ವಿಶಿಷ್ಟ ಕಾಣಿಕೆಯನ್ನು ಸಾಕಲ್ಯವಾಗಿ ತೋರಿಸಲಾಗಿದೆ. ಈ ರಿಷಿ ಮುನಿ ಮಹಾಪುರುಷರ ಉದಾತ್ತಜೀವನ ಧವಳಿಮೆಯು, ಅವರು ಮಾಡಿದ ಮಹೋಜ್ವಲ ಸಾಧನೆಗಳಲ್ಲಿ ಪಾರದರ್ಶಕವಾಗಿ ಕಾಣುತ್ತದೆಯೆಂಬಂತಹ ಉತ್ಕೃಷ್ಟ ಶಾಸನಗಳು ಈ ಅವಧಿಯಲ್ಲಿ ರಚಿತವಾಗಿವೆ.

ಜೈನಾಚಾರ್ಯರು ಪಾರಲೌಕಿಕ ಚಿಂತನೆಯೊಂದಿಗೆ ಲೌಕಿಕ ಚಿಂತನೆಯನ್ನು ನಡಸಿದ್ದಾರೆ. ಜೈನಗುರುಮನೆಗಳಿಗೆ, ಬಸದಿಗಳಿಗೆ, ಅರಮನೆಗಳ ಹಾಗೂ ಆಡಳಿತಾಂಗದ ಸಂಪರ್ಕ ನಿಕಟವಾಗಿತ್ತು. ಪಾರ್ಶ್ವನಾಥ ತೀರ್ಥಂಕರರ ಪ್ರಭಾವವು ಬುದ್ಧ–ಮಹಾವೀರರ ಕುಟುಂಬಗಳಲ್ಲಿತ್ತು. ಮಹಾವೀರರ ನಂಟಸ್ತಿಕೆಯು ಚೇಟಕ, ಶ್ರೇಣಿಕ ಮೊದಲಾದ ಮೌರ್ಯರ ಕಾಲದ ರಾಜಮನೆತನಗಳೊಂದಿಗೆ ಇತ್ತು. ಹೀಗೆ ಸುಮಾರು ಸಾವಿರ ವರ್ಷಗಳವೆರಗೆ, ಜೈನ ಆಚಾರ್ಯರಿಗೂ ರಾಜ ಮನೆತನಗಳಿಗೂ ಪರಸ್ಪರ ಪ್ರಭಾವ ಬೆಳೆದು ಬಂದಿದೆ. ಕನ್ನಡ ನಾಡಿನಲ್ಲೂ ಗಂಗರು, ಸಿಂಹಣಂದಿ ಆಚಾರ್ಯರ ಕೃಪೆಯಿಂದ ಚಿಗುರಿದುದನ್ನು ಶಾಸನಗಳು ಹೇಳುತ್ತಿವೆ [ಎ.ಕ.೭–೧ ಶಿವಮೊ. ೪.೧೧೨, ಕಲ್ಲೂರುಗುಡ್ಡ: ಎ.ಕ.೮(೧೯೦೨). ೩೫. ೧೦೭೭. ಹೊಂಬುಜ (ಶಿಜಿ/ಹೊಸನಗರ ತಾ)]. ಚಾಳುಕ್ಯ ಸಮ್ರಾಜ್ಯವೂ ಇದೇ ಮಾದರಿಯನ್ನು ಮುಂದುವರಿಸಿತು. ಜೈನ ಮುನಿಗಳು ರಾಜಕೀಯ ಪ್ರಭಾವ ಪಡೆದಿದ್ದರು, ಚಾಳುಕ್ಯ ಚಕ್ರವರ್ತಿಗಳಿಂದಲೂ ಪೂಜಿತರಾಗಿದ್ದರು. ಈ ರಿಷಿಮುನಿಗಳಲ್ಲಿ ನಂದಿಪಂಡಿತದೇವ, ಗುಣಚಂದ್ರ ಪಂಡಿತ–ಮುಂತಾದ ಹತ್ತಾರುಜನ ಆಚಾರ್ಯರು ಅಗ್ರಗಣ್ಯರು. ಅನಂತವೀರ್ಯಮುನಿಪರನ್ನೂ, ಇಂದ್ರನಿಂದ ಪಂಡಿತದೇವ ಮೊದಲಾದ ಮುನಿಪರನ್ನೂ ಶಾಸನಗಳು ವಿಶೇಷವಾಗಿಯೇ ಪ್ರಶಂಸಿಸಿವೆ. ಚಕ್ರಿಗಳಿಂದಲೇ ಅಲ್ಲದೆ ಪಟ್ಟ ಮಹಿಷಿಯರಾದಿಯಾಗಿ ಪಿರಿಯರಸಿ ಕಿರಿಯರಸಿಯರಿಂದಲೂ (ಮಹಾ) ಸಾಮಂತ (ಮಹಾ) ಮಂಡಲೇಶ,(ಮಹಾ) ದಂಡಾಧಿಪತಿ, ಮಂತ್ರಿಗಾವುಂಡ ಮುಂತಾದ ಅಧಿಕಾರ ವರ್ಗದಿಂದಲೂ ಪರಿವಾರ ಪ್ರಜೆಗಳಿಂದಲೂ ಸಮ್ಮಾನಿತರಾಗಿದ್ದರು: ಪದ್ಮನಂದಿ ಸಿದ್ಧಾಂತಿ, ಇಂದ್ರಕೀರ್ತಿ ಮುನೀಂದ್ರ ಇತ್ಯಾದಿ. ಇದಲ್ಲದೆ ಅಧಿಕಾರೇತರ ಪ್ರತಿಷ್ಠಿತ (ರಾಜ) ವರ್ತಕವರೇಣ್ಯರಿಂದಲೂ ಇವರು ಬಹುಗೌರವ ಭಜನರಾಗಿದ್ದರೆಂದು ಚಾಳುಕ್ಯರ ಶಾಸನಗಳು ತಿಳಿಸಿವೆ.

ಇನ್ನು ಜೈನಯತಿಗಳ ತಪಸ್ಸಿನ ವಿಚಾರ. ಅವರ ತಪದ ಮಹಿಮೆಯನ್ನೂ, ಸಾಮಾಜಿಕ ಸ್ಥಾನಮಾನಗಳಂತೆಯೇ ಚಾಳುಕ್ಯರ ಕಾಲದ ಶಾಸನಗಳು ಸವಿವರವಾಗಿ ವರ್ಣಿಸಿವೆ: ಅರ್ಹಣಂದಿ ಬೆಟ್ಟದದೇವ ಮುನಿಯ ಶಮ ದಮಾದಿ ಶಾಂತಗುಣವನ್ನು ಶಾಸನ ಎತ್ತಿ ಹಾಡಿದೆ. ದಾಮನಂದಿ

ಮುನಿಯ ದೃಷ್ಟಾಂತ ನೆನಪಿನಲ್ಲಿ ನಿಲ್ಲುತ್ತದೆ. ಬಸದಿಗಳ ಮುಂದಣ ಮಾನಸ್ತಂಭದ ಹಾಗೆ, ಎಷ್ಟೋ ರಿಷಿಮುನಿಕಂತಿಯರನ್ನು ಶಾಸನಕಾರರು ಪ್ರಭವಶಾಲಿಯಾಗಿ ಬಿಡಿಸಿದ್ದಾರೆ. ತಪೋಧನರಾದ ಈ ಋಷಿಗಳ ವ್ಯಕ್ತಿ-ವ್ಯಕ್ತಿತ್ವದ ಎರಡೂ ಪರಿಚಯ ಏಕಕಾಲದಲ್ಲಿ ಆಗುವಂತೆ ಶಾಸನಗಳು ಚಿತ್ರ ಕಡೆದು ಬಿಡಿಸಿರುವುದು ಉಂಟು: ಹರಿಣಂದಿದೇವ ಎಂಬ ಶ್ರವಣನ ಶ್ರವಣವನ್ನು ಹೆಸರಿಸಬಹುದು

'ಕುಂತಳಾ ಪುರದೊಳು ಚೈತ್ಯಾಲಯಮಂ ಮಾಡಿ
ದೇವರ ಪೂಜಾವಿಧಾನಕ್ಕಂ ಚಾತುರ್ವರ್ಣ ಸಂಘ ಸಮುದಾಯ
ಚತುಸ್ಸಮಯದಾಹಾರ ದಾನಕ್ಕಂ'

ದತ್ತಿಯಿತ್ತುದೂ, ಅಲ್ಲಿನ ಜಿನಾಲಯನ್ನು ಸಮುದಾಯಕ್ಕೆ ಮುಖ್ಯಸ್ಥಳವಾಗಿಸಿದುದೂ ಶಾಸನೋಕ್ತವಾಗಿದೆ[ಎ.ಕ.೭-೧, ಶಿವಮೊ. ೬೪. ಸು. ೧೧೧೨. ಪುರಲೇಗ್ರಾಮ. ಪು. ೬೯. ಸಾಲು: ೯೩]. ಜೈನ ಸನ್ಯಾಸಿ, ಸನ್ಯಾಸಿ, ಶ್ರಾವಕ (ಗೃಹಸ್ಥ), ಶ್ರಾವಕಿ (ಗೃಹಿಣಿ)-ಇದು ಚತುರ್ವರ್ಣ ಶ್ರವಣ ಸಂಘದ ನಾಲ್ಕು ಅಂಗಗಳು. ಜೈನಧರ್ಮ ಪ್ರಣೀತವೂ ಜೈನಾಚಾರ್ಯ ನಿರ್ಣೀತವೂ ಆದ ಜೈನ ಸಮಾಜದ ಆಧಾರ ಸ್ತಂಭ ವಾಗಿರುವ, ನಾಲ್ಕು ಕಾಲುಗಳಿರುವ ಈ ಚತುಸ್ಸಂಘ. ಹೆಣ್ಣಿಗೆ ಸನ್ಯಾಸಾಶ್ರಮದಲ್ಲೂ, ಗೃಹಸ್ಥಾಶ್ರಮದಲ್ಲೂ ಗಂಡಸಿಗೆ ಸಮನಾದ ಸ್ಥಾನ ಕೊಡಲಾಗಿದೆ.

ಜೈನಸನ್ಯಾಸಿನಿಯರನ್ನೂ ಚಾಳುಕ್ಯ ಶಾಸನಗಳು ಕಂಡರಿಸಿವೆ: ಚಂದ್ರಮತಿ ಅವ್ವೆ, ಹುಳಿಯಬ್ಬೆ ಅಜ್ಜಿಕೆ-ಇವರ ಚಿತ್ರ ಕಣ್ಣ ಬೊಂಬೆಯಲ್ಲಿ ನಾಟಿನಿಲ್ಲುತ್ತದೆ; ಇವರಲ್ಲದೆ ಸೂರಸ್ತಗಣಕ್ಕೆ ಸೇರಿದ ಅರಸವ್ವೆಗನ್ತಿ, ಮಾಕವ್ವೆಗನ್ತಿಯರ ಪ್ರಸ್ತಾಪವೂ ಇದೆ.

ಚಾಳುಕ್ಯರ ರಾಜ್ಯಭಾರ ಕಾಲದಲ್ಲಿ ಶ್ವೇತಾಂಬರ ಪಂಥದ ಶಾಸನಗಳು ಕಾಣುವುದಿಲ್ಲ: ಅವರ ಆಳಿಕೆಯಲ್ಲಿರುವುದು ಎರಡೇ ಪಂಥಗಳು: ದಿಗಂಬರ ಮತ್ತು ಯಾಪನೀಯ. ದಿಗಂಬರ ಪಂಥವೇ ಪ್ರಧಾನವಾಗಿ ಮತ್ತು ಏಕಮೇವಾದ್ವಿತೀಯವಾಗಿ ವಿಜೃಂಭಿಸಿದಂತೆ ಮೇಲು ಮೇಲಿನ ತೇಲು ನೋಟಕ್ಕೆ ತೋರಬಹುದು. ಆದರೆ ವಾಸ್ತವವಾಗಿ ಚಾಳುಕ್ಯರ ಕಾಲದಲ್ಲಿ ಅತ್ಯಂತ ಜನಪ್ರಿಯವಾಗಿದ್ದುದು ಯಾಪನೀಯ ಸಂಘಾ. ಈ ಕಾಲದ ಶಾಸನಗಳನ್ನು ಆಳವಾದ ಅಧ್ಯಯನ ಕೈಗೊಂಡವರಿಗೆ ಇದೇನೂ ಅಚ್ಚರಿಯಲ್ಲ. ಯಾಪನೀಯ ಸಂಘ'ದ ಪ್ರಚಾರ–ಪ್ರಸಾರದ ಅಧಿಕ್ಯವನ್ನು ನೂರಾರು ಶಾಸನಗಳ ಆಧಾರದಿಂದ ಸ್ಥಾಪಿಸಬಹುದು. ರಾಜರಾಣಿ, ಪ್ರಭು–ಪ್ರಜೆ ಎಲ್ಲ ಸ್ತರದಲ್ಲೂ ಹೆಚ್ಚುಬಲ–ಬೆಂಬಲ ಯಾಪನೀಯ ಪಂಥಕ್ಕೆ ಲಭ್ಯವಾಗಿತ್ತು.

ಯಾಪನೀಯವು ಕರ್ನಾಟಕದ ಸಂದರ್ಭದಲ್ಲಿಯೇ ಹುಟ್ಟಿತೆಂಬ ಸೂಚನೆಗಳು ವ್ಯಕ್ತ ಪಟ್ಟಿವೆ. ಆದರೆ ಇದೇನೂ ಐತೀರ್ಪಲ್ಲ. ಯಾಪನೀಯ ಸಂಘದ ಹುಟ್ಟು ಬೆಳವಣಿಗೆ ಹರಹು ಹೊಡುಗೆ ಕುರಿತು ನನ್ನ ಸಂಶೋಧನೆಯ ಫಲಿತಗಳನ್ನು, ಹೊಸ ವಿಚಾರಗಳನ್ನು ಯಥಾವಕಾಶ ಹೇಳಲಾಗುವುದು. ಇಲ್ಲಿ ಹೇಳಬೇಕಾದ ಮಾತೆಂದರೆ, ಯಾಪನೀಯವು ಚಾಳುಕ್ಯರ ಕಾಲದಲ್ಲಿ ತನ್ನ ಶಿಖರ ಸ್ಥಿತಿಯನ್ನು ಮುಟ್ಟಿತೆಂಬುದು. ವಿರೋಧಾಭಾಸದ ಪರಾಕಾಷ್ಠೆಯೆಂದರೆ ಜನಾನುರಾಗದ ತುಟ್ಟತುದಿಯನ್ನು ಮುಟ್ಟಿದ ಯಾಪನೀಯವು, ಶೈವ–ವೀರಶೈವರ ಹೊಡೆತಗಳಿಂದ, ತನ್ನ ಅವಸಾನವನ್ನು ಕಂಡಿದ್ದು ಕೂಡ ಇದೇ ಪ್ರಭುತ್ವ ಇಳಿಗಾಲದಲ್ಲಿ. ಚಾಳುಕ್ಯ ಅರಸೊತ್ತಿಗೆಯೊಂದಿಗೇನೆ ಯಾಪನೀಯವೂ ಚರಿತ್ರೆಯ ವೇದಿಕೆಯಿಂದ ಕೆಳಗಿಳಿಯಿತು. ಅನಂತರವೂ ಇನ್ನೂ ಇನ್ನೂರುವರ್ಷ ಯಾಪನೀಯ ಉಸಿರಾಡಿದ್ದು ದಿಟ; ಆದರೆ ಹನ್ನೆರಡನೆಯ ಶತಮಾನಂತರದ ಯಾಪನೀಯಕ್ಕೆ, ೧೦–೧೧–೧೨ ನೆಯ ಶತಮಾನಗಳಲ್ಲಿದ್ದ ಆತ್ಮ ದೀಪ್ತಿ, ಆತ್ಮ ಪ್ರತ್ಯಯ ಮತ್ತು ರಾಜಕೀಯ ಕುಮ್ಮಕ್ಕು ಹಿಂದಿನ ಪ್ರಮಾಣದಲ್ಲಿ ಇರಲಿಲ್ಲ ಎಂಬ ಅಂಶವೂ ಶಾಸನಗಳ ಅಧ್ಯಯನದಿಂದ ಮನವರಿಕೆಯಾಗುತ್ತದೆ.

ಇದುವರೆಗೆ ಸಾರಾಂಶರೂಪದಲ್ಲಿ ಹೇಳಿರುವ ಪೀಠಿಕೆಯನ್ನು ಸಮರ್ಥಿಸುವುದಕ್ಕೆ ಬೇಕಾದ ಕೆಲವು ಶಾಸನೋಕ್ತ ಜೈನಾಚಾರ್ಯರನ್ನು, ಈ ಚಾಳುಕ್ಯರ ಆಳಿಕೆಗೆ ಸೀಮಿತಗೊಳಿಸಿ, ಅಕಾರಾದಿಯಾಗಿ ಮುಂದೆ ಕೊಟ್ಟಿದೆ. ಶಾಸನಗಳಲ್ಲಿ ಇವರ ವ್ಯಕ್ತಿತ್ವ ವಿಚಾರಗಳು ವಿಸ್ತಾರವಾಗಿ ಸಿಗುತ್ತದೆ, ಆ ವಿವರಗಳನ್ನೂ ಅವುಗಳಿಗೆ ಇರುವ ಆಯಾಮಗಳನ್ನು, ಅನ್ಯಾನ್ಯ ಪೂರಕ ಸಾಮಗ್ರಿಯನ್ನೂ ವಿವೇಚಿಸುವುದಕ್ಕೆ ತೊಡಗಿದರೆ ಅದು ನೂರಾರು ಪುಟಗಳ ಹೊತ್ತಗೆಯೇ ಆದೀತು. ಅದರಿಂದ ತೀರ ಸಾರಸಂಗ್ರಹ ರೂಪದಲ್ಲಿ ಈ ಕಾಲದ ಅ ಆಚಾರ್ಯರ ನಾಮಾವಳಿಯನ್ನೂ, ಅವರ ಪ್ರಸ್ತಾಪ ಇರುವ ಶಾಸನ ಮಾಹಿತಿಯನ್ನೂ ಕೆಳಗೆ ಕೊಟ್ಟಿದ್ದೇನೆ:

೧. ಅಕಲಂಕಚಂದ್ರ ಭಟ್ಟಾರಕ ಮತ್ತು ಭಾನುಕೀರ್ತಿದೇವರ ಆದೇಶದಂತೆ ಕಲಿಕೆಱ (ಕಲ್ಕೇರಿ) ಯಲ್ಲಿ ಒಂದು ಜಿನಗೃಹದ ರಚನೆಯಾದ ವಿಷಯವನ್ನು ಅಲ್ಲಿನ ಶಾಸನ ನಿವೇದಿಸಿದೆ [ಎಆರ್‌ಎಸ್‌ಐಇ ೧೯೨೭-೨೮ ಎಪಿಪಿ ನಂ. ೫೧. ಅತೇದಿ. ಕಲ್ಕೇರಿ (ಧಾಜಿ/ಮುಂಡರಗಿ ತಾ)]. ಅಕಲಂಕರ ಚಂದ್ರ ಭಟ್ಟಾರಕ ಆಚಾರ್ಯರು ಕ್ರಾನೂರು ಗಣಕ್ಕೆ ಸೇರಿದವರು. ಈ ಮುನಿಯ ಮತ್ತು ಶಾಸನದ ತೇದಿಯನ್ನು ಸು. ೧೧೪೦ ಎಂದು ತಿಳಿಯಬಹುದು.

೨. ಅಜಿತಸೇನ ಮುನಿಪತಿಯು ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಬೆಳಗಿದ ಧ್ರುವನಕ್ಷತ್ರ. ಗಂಗರಿಂದಲೂ ರಾಷ್ಟ್ರಕೂಟರಿಂದಲೂ ಮತ್ತು ಅಂತಿಮವಾಗಿ ಚಾಲುಕ್ಯರಿಂದಲೂ ಪೂಜಿತರಾಗಿದ್ದರೆಂಬುದು ಇವರ ಪ್ರಭಾವೀ ವ್ಯಕ್ತಿತ್ವದ ಎತ್ತರ ಬಿತ್ತರಗಳನ್ನು ಬಿಚ್ಚಳಿಸುತ್ತದೆ. (ಚಂಪಕ ಮಾಲೆ)

ಸುರಪತಿ ಪೂಜಿತಂ ನೃಪತಿ ಸೇವಿತಮುನ್ನತಗಂಗ ಮಂಡಲೇ
ಶ್ವರ ಮಕುಟಾರ್ಚಿತಂ ಭುವನದಿಂ ತಮಗೆಂಬ ನೆಗೞ್ತೆ ವೆತ್ತಲಂ
ಕರಿಸಿ ಜಗತ್ಪವಿತ್ರಮೆನೆ ಸಂದುದಱಿಂದೆಮಗಿಷ್ಟ ಸಿದ್ಧಿಯಂ
ದೊರೆಕೊಳಿಸುತ್ತು ಮಿರ್ಕಜಿತಸೇನ ಮುನೀಂದ್ರ ಪದಾಂಬುಜದ್ವಯಂ ||

[ಕವಿಚಕ್ರವರ್ತಿರನ್ನ, ೯೯೩, ಅಜಿತಪುರಾಣಂ, ೧–೭.]

ರನ್ನಕವಿಯ ಹೇಳಿಕೆಯಲ್ಲಿ ಎರಡು ಮಡಿಕೆಗಳಿವೆ:

**i.** ನೃಪತಿ ಸೇವಿತಂ, **ii.** ಗಂಗ ಮಂಡಲೇಶ್ವರ ಮುಕುಟಾರ್ಚಿತಂ. ಆಗಿನ ಸಮಕಾಲಿಕ ಚಾರಿತ್ರಿಕಾಧಾರ ಪರಿಸರಗಳನ್ನು ಒಳಹೊಕ್ಕು ನೋಡಿದರೆ ಈ ಪದ್ಯಾರ್ಥವು ಸುಬೋಧವಾಗುತ್ತದೆ. ಆಗತಾನೆ ಹೊಸದಾಗಿ ಹುಟ್ಟಿದ ಚಾಳುಕ್ಯ ಸಾಮ್ರಾಜ್ಯದ ತೈಲಪನೃಪತಿಯೂ (ನೃಪತಿ ಸೇವಿತಂ), ಆಗಷ್ಟೇ ಅಸ್ತಂಗತವಾಗುತ್ತಿದ್ದ ಗಂಗರ ಮಂಡಲದ ಮಾರಸಿಂಹನೂ (ಉನ್ನತಗಂಗ ಮಂಡಲೇಶ್ವರ ಮುಕುಟಾರ್ಚಿತಂ), ಈ ಅಜಿತ ಸೇನ ಮುನೀಂದ್ರರನ್ನು ವಂದಿಸಿ ಆರಾಧಿಸಿದ್ದಾರೆಂಬುದೇ ಈ ಪದ್ಯದ ವಾಚ್ಯಾರ್ಥ. ಹೀಗಾಗಿ ಅಜಿತಸೇನ ಮುನಿಪರು ಉಭಯರಾಜ್ಯ– ಸಾಮ್ರಾಜ್ಯ ಪುರಸ್ಕೃತರು. ಅವರು ತೈಲುಪನಿರ್ಮಡಿಯ ರಾಜಗುರು, ಕವಿರನ್ನನ ಗುರು, ಗಂಗಮಾರಸಿಂಹ ಇಮ್ಮಡಿಯ ಕುಲಗುರು, ಬಂಕಾಪುರ ತೀರ್ಥದ ಆಚಾರ್ಯರು, ಚಾಮುಣ್ಡರಾಯನ ಅಧ್ಯಾತ್ಮ ಪ್ರವೃತ್ತಿಗೆ ಮಾರ್ಗದರ್ಶಕರು. ಮಾರಸಿಂಹನು ಸಲ್ಲೇಖನ ವ್ರತವನ್ನು ಅಜಿತಸೇನಮುನೀಂದ್ರರಿಂದ ಪಡೆದು ಬಂಕಾಪುರದಲ್ಲಿ ಮುಡಿಪಿದನು. ಇಷ್ಟು ಘನೋನ್ನತ ಮುನಿಯನ್ನು ಕುರಿತು ಹಲವಾರು ಶಾಸನಗಳಿವೆ [ಎ.ಇ. ೧೬, ೯.೧೦೫೩. ಮುಳ್ಗುಂದ; ಎ.ಇ. ೫, ೧೫೨, ೧೭೧, ೧೮೦ ಇತ್ಯಾದಿ; ಎ.ಕ. ೨(ಪ.) ೩೮, ೬೭ ಇತ್ಯಾದಿ]

೩. ಅಜಿತಸೇನ ವಾದೀಭಸಿಂಹ ಮುನಿಯು ಶಬ್ಧಚುತುರ್ಮುಖ, ತಾರ್ಕಿಕ ಚಕ್ರವರ್ತಿ, ಬಿರುದಾಂಕಿತ ತಪಸ್ವಿ [ಹೊಂಬುಜ ೧,೨. ೧೦೭೭]. ಕನ್ನಡ ಮತ್ತು ಸಂಸ್ಕೃತ ಶಾಸನಪದ್ಯಗಳಲ್ಲಿ ಇವರ ವರ್ಚಸ್ಸನ್ನು ಪ್ರಸ್ತಾಪಿಸಿದೆ, ಅವುಗಳ ಗದ್ಯಾನುವಾದ ಸಾರಾಂಶ: ಅಜಿತಸೇನ ದೇವನು ಬ್ರಹ್ಮನೇ ಆದರೂ ಒಂದೇ ಮುಖವಿದೆಯೇ ಹೊರತು ನಾಲ್ಮೊಗನಲ್ಲ, ಗಣಪತಿಯ ಹಾಗೆ ಜಾಣನಾದರೂ ಆನೆ ಮೊಗದವನಲ್ಲ, ಸರಸ್ವತಿಯೇ ಆದರೂ ಹೆಂಗಸಲ್ಲ, ಎಲ್ಲ ಕಲೆಗಳನ್ನು ಹೊಂದಿದವನಾದರೂ ಚಂದ್ರನಲ್ಲ, ಕಾಮನನ್ನು ಸುಟ್ಟಿದ್ದರೂ

ಈಶ್ವರನಲ್ಲ, ಇಂತಹ ಅಜಿತಸೇನದೇವ ಪಾಣ್ಡಿತನ ಚರಿತೆಯು ನಿಜಕ್ಕೂ ವಿಚಿತ್ರವೇ ಸರಿ. ಸಂಖ್ಯಾಗಮ ಮೋಡಗಳನ್ನು ಚದುರಿಸುವ ಬಿರುಗಾಳಿ, ಬೌದ್ಧಾಗಮವೆಂಬ ಕಡಲನ್ನು ಹೀರಿ ಬರಿದಾಗಿಸುವ ಬಡವಾನಲ, ಜೈನಾಗಮವೆಂಬ ಸಮುದ್ರವನ್ನು ಹೆಚ್ಚಿಸುವ ಚಂದ್ರ ಎಂಬುದಾಗಿ ಖ್ಯಾತರಾಮರು [ನಾಗರಾಜಯ್ಯ, ಹಂಪ: ಸಾಂತರರು– ಒಂದು ಅಧ್ಯಯನ (೧೯೯೭) : ೧೫೮–೫೯.]

೪. ಅಣ್ಣಿಯ ಭಟ್ಟಾರಕರು ಚಾಳುಕ್ಯರ ಜಗದೇಕಮಲ್ಲ್ ಜಯಸಿಂಹರಾಜನ ಆಳ್ವಿಕೆಗೆ ಸೇರಿದ ಶಾಸನದಲ್ಲಿ ಶ್ಲಾಘಿತರಾಗಿದ್ದಾರೆ– ಇವರ ನಿಯಮ ಆಚಾರ ವಿಚಾರ ಸಾರಗುಣ ಜ್ಞಾನಗಳನ್ನು ಮೆಚ್ಚಲಾಗಿದೆ [ಸೌ.ಇ.ಇ. ೧೧–೧, ೬೧.೧೦೨೪. ಮರೋಳ (ಬಿಜಾಪುರ ಜಿ/ ಹುನಗುಂದ ತಾ)]

೫. ಅನಂತವೀರ್ಯ ಮುನಿಪರು, ಭೋಜನಾಂಗ ತರುವಾಗಿಹ ಗೋವರ್ಧನ ದೇವನ ಸಮೀಪದೊಳ್, ಭೂಷಣಾಂಗಂ ಪುಟ್ಟವಂತೆ ಪುಟ್ಟೆ ಸಂದ ಕೀರ್ತಿ ಸಾಮಾನ್ಯಮೇ ಎಂದು ಒಂದು ಶಾಸನ ಅಚ್ಚರಿಗೊಂಡು ಕೇಳಿದೆ [ಸೌ.ಇ.ಇ. ೧೧–೧, ೭೮. ೧೦೪೫. ಮುಗದ (ಧಾಜಿ/ತಾ)]. ಮರೋಳದ ಶಾಸನದಲ್ಲಂತೂ ಈ ಮುನಿಯ ಒಂದು ಭಾವಚಿತ್ರವೇ ಸಿಗುತ್ತದೆ: (ಮತ್ತೇಭ ವಿಕ್ರೀಡಿತ ವೃತ್ತ ಪದ್ಯ)

ಸಕಳ ವ್ಯಾಕರಣಂ ನಿಘಂಟು ಗಣಿತಂ ವಾತ್ಸ್ಯಾಯನಂ ಜ್ಯೋತಿಷಂ
ಶಕುನಂ ಛನ್ದಮನುವು ಗಾಂಧರಮಳಂಕಾರಂ ಮಹಾಕಾವ್ಯನಾ
ಟಕಮಧ್ಯಾತ್ಮಿಕಮರ್ತ್ಥ ಶಾಸ್ತ್ರತತಿ ಸಿದ್ಧಾನ್ತ ಪ್ರಮಾಣಂಗಳೆಂ
ಬ ಕಳಾ ವಿದ್ಯೆಗನನ್ತವೀರ್ಯ್ಯ ಮುನಿಪರ್ಸ್ಸರ್ವ್ವಜ್ಞರೀ ಧಾತ್ರಿಯೊಳ್ ||

[ಸೌ.ಇ.ಇ. ೧೧–೧, ೬೧. ೧೦೨೪. ಮರೋಳ (ಬಿಜಾಪುರ ಜಿ/ಹುನಗುಂದ ತಾ) ಪು. ೫೦–೫೧]

ಸುಪ್ರಸಿದ್ಧವಾದ ಚತುಃಷಷ್ಟಿ (೬೪) ಕಲೆಗಳಲ್ಲಿ ಮತ್ತು ೧೫ ಕಲಾವಿದ್ಯೆಗಳಲ್ಲಿ ಈ ಅನಂತವೀರ್ಯಮುನಿಪರು ಸರ್ವಜ್ಞತ್ವವನ್ನು ಪ್ರಾಪ್ತಿ ಮಾಡಿಕೊಂಡು ನಾಡಿನಲ್ಲಿ ಮನೆಮಾತಾಗಿದ್ದು ಚಾಳುಕ್ಯರಾಜ್ಯದ ಗೌರವಕ್ಕೆ ಭಾಜನರಾಗಿದ್ದರು.

೬. ಅಭಯನಂದಿ [ಎ.ಇ. ೧೫, ೨೩. ಪು. ३३೭. ೧೦೭೧-೭೨], ಅರುಹಣಂದಿ ಭಟ್ಟಾರಕ [ಸೌ.ಇ.ಇ. ೧೧-೧, ೧೧೩. ೧೦೭೪. ಹುನಗುಂದ], ಅಷ್ಟುಪಾಸಿಮುನಿಪತಿ [ಸೌ.ಇ.ಇ. ೯-೧, ೧೧೫. ೧೦೫೪], ಅತ್ತಿಮಬ್ಬೆಯ ಕುಲಗುರುಗಳಾದ ಅರ್ಹಣನ್ದಿ ಪಂಡಿತದೇವ [ಸೌ.ಇ.ಇ. ೧೧-೧. ೫೨.೧೦೦೭. ಲಕ್ಕುಂಡಿ] ಮೊದಲಾದ ಗುರುಗಳು ನಾನಾ ಕಾರಣಗಳಿಂದ ಪ್ರಾಮುಖ್ಯಪಡೆದಿದ್ದಾರೆ [ನಾಗರಾಜಯ್ಯ, ಹಂಪ: ಕವಿವರ ಕಾಮಧೇನು ಅತ್ತಿಮಬ್ಬೆ: ೧೯೯೬] . ಮರದ ಕೆಳಗೆ, ಕಲ್ಲು ಬಂಡೆಯಮೇಲೆ (ಕಲ್ನೆಲೆ), ನೀರಿನ ನಡುವೆ ನಿಂತು ಕದಲದೆ ತಪವೆಸಗಿದವರು ಅರ್ಹನನ್ದಿ ಬೆಟ್ಟದದೇವ ಮುನಿ [ಕಜಿಶಾ:ಹುಣಸಿಹಡಗಲಿ. ३೮. ೧೯೯]; ಇವರು ನಾಗಚಂದ್ರಕವಿಯ ಗುರುಗಳಾದ ಬಾಳಚಂದ್ರದೇವ ಮುನಿಪ ಸಂತನದಲ್ಲಿ ಬಂದ ಪ್ರಸಿದ್ಧರು [ಸೌ.ಇ.ಇ. ೧೮, ೧೯. ೧೧೧೨. ಕನ್ನವುರಿ=ಕಣ್ಣೂರು (ಬಿಜಾಪುರ ಜಿ/ತಾ) ಪು. ೧೨೧; ನಾಗರಾಜಯ್ಯ, ಹಂಪ: ನಾಗಚಂದ್ರ-ಇತಿವೃತ್ತ: ೧೯೯೨].

೭. ಇಂದ್ರಕೀರ್ತಿ ಮುನೀಂದ್ರ [ಸೌ.ಇ.ಇ. ೯-೧, ೧೧೭. ೧೦೫೫. ಕೋಗಳಿ (ಬಳ್ಳಾರಿ ಜಿ/)] ಇಂದ್ರನಂದಿಪಂಡಿತದೇವ [ಬಾ.ಕ.ಇ. ೧-೧, ೧೨३. ೧೦೮೦. ಹುನಗುಂದ], ಉತ್ತರಾ ಸಂಗ ಭಟ್ಟಾರಕ [ಸೌ.ಇ.ಇ. ೧೧-೧. ೧೧३. ೧೦೭೪], ಉದಯ ಚಂದ್ರ ಸೈದ್ಧಾಂತ ದೇವ [ಎ.ಇ. ೧೫, ೨३. ೧೦೭೪], ಉದಯ ಚಂದ್ರ ಸೈದ್ಧಾಂತ ದೇವ [ಎ.ಇ.೧೫, ೨३. ೧೦೭೧-೭೨]- ಇವರುಗಳು ಅಗಾಧವಾದ ಶಿಷ್ಯಸಂಪತ್ತಿನಿಂದ ಜ್ಞಾನ ನಿಧಿಗಳಾಗಿದ್ದರು.

೮. ಕನಕನನ್ದಿ ಭಟ್ಟಾರಕ [ಸೌ.ಇ.ಇ. ೧೮, ೭೧. ೧೦೬೬], ಕನಕಪ್ರಭ ಸಿದ್ಧಾಂತದೇವ [ಸೌ.ಇ.ಇ. ೨೦, ೬೨. ೧೯೮. ಸೌದತ್ತಿ], ಕನಕಸೇನಭಟ್ಟಾರಕ [ಎ.ಇ.೧೬.೯.೧೦೫३. ಮುಳ್ಗುಂದ],

ಕನಕಶಕ್ತಿಸಿದ್ಧಾಂತದೇವ [ಸೌ.ಇ.ಇ. ೧೫, ೫೩೦. ೧೦೫೯] ಕಮಳದೇವ ಚಾರ್ಯ [ಸೌ.ಇ.ಇ. ೧೫, ೧೨೮. ೧೧೭೪ ಚಿಕ್ಕಹಂದಿಗೋಳ (ಧಾಜಿ/ಗದಗ ತಾ ಪು. ೧೬೧-೬೩], ಕಮಳಭದ್ರ ದೇವ [ಹೊಂಬುಜ ೧, ೨.೧೦೭೭ (ಶಿಜಿ/ಹೊಸನಗರ ತಾ)], ಕೀರ್ತಿದೇವ ಮುನಿಪತಿ [ಸೌ.ಇ.ಇ. ೧೧-೧, ೬೧.೧೦೨೪ ಮರೋಳ], ಕುಮಾರಕೀತಿ ಮನೀಂದ್ರ [ಸೌ.ಇ.ಇ. ೧೧-೧, ೭೮. ೧೦೪೫]- ಮೊದಲಾದ ಯತೀಶ್ವರರು ಸಕಳ ಶಾಸ್ತ್ರಕುಶಲರೂ, ಶಬ್ದಾರ್ಥತತ್ವರರೂ, ಉದ್ಯದ್ಗುಣ ಭೂಷಣರೂ ಆಗಿದ್ದರು.

೯. ಗುಣಭದ್ರ ಸಿದ್ಧಾಂತಿದೇವ [ಸೌ.ಇ.ಇ. ೨೦, ೩೨. ೧೦೪೫. ಕೂಯಿಬಾಳ (ಧಾಜಿ/ಕುಂದಗೋಳ ತಾ)], ಗುಣ ಕೀರ್ತಿ ಸಿದ್ಧಾಂತ ಭಟ್ಟಾರಕ [ಸೌ.ಇ.ಇ. ೧೧-೧.೬೧.೧೦೨೪] ಗಂಡವಿಮುಕ್ತ ಭಟ್ಟಾರಕ [ಎ.ಇ.೧೫.೨೩. ೧೦೭೧-೭೨], ಗೋವರ್ಧನದೇವ [ಸೌ.ಇ.ಇ. ೧೧-೧, ೭೮. ೧೦೪೫], ಕಂತಿಯಾದ ಚಂದ್ರಮತಿಯವ್ವೆ [ಸೌ.ಇ.ಇ. ೧೮, ೧೫೧. ೧೧೪೮] ಚಾರುಕೀರ್ತಿ ಪಂಡಿತ [ಸೌ.ಇ.ಇ.೧೧, ೧೪೧. ೧೯೭], ಆಚಾರ್ಯಜಯಕೀರ್ತಿ ಸಿದ್ಧಾಂತದೇವ [ಸೌ.ಇ.ಇ. ೧೫, ೬೩೭. ೧೨ಶ. ಜಾವೂರು (ಧಾಜಿ/ನವಲಗುಂದ ತಾ) ಪು. ೪೦೮], ತ್ರಿವಿದ್ಯ ಗೋವರ್ಧನ [ಸೌ.ಇ.ಇ. ೧೧-೧, ೭೮], ತ್ರಿಭುವನ ಚಂದ್ರ ಪಂಡಿತ [ಎ.ಇ. ೧೫, ೨೩. ೧೦೭೧-೭೨], ತ್ರಿಭುವನ ಕೀರ್ತಿರಾವುಳ [ಎಆರ್ಎಸ್ಐಇ ೧೯೧೭. ಸಿ-೪೦. ೧೨ಶ]- ಮೊದಲಾದವರು ತ್ರೈವಿದ್ಯ ಚಕ್ರೇಶ್ವರರೆನಿಸಿ, ವಿದ್ಯಾ ಪ್ರೌಢಿಮೆಯಿಂದ ಕೀರ್ತಿವಂತರಾಗಿದ್ದರು.

೧೦. ದಾಮನಂದಿ ಗಂಡವಿಮುಕ್ತ [ಸೌ.ಇ.ಇ. ೧೧-೧, ೭೮.೧೦೪೫], ದೇವಕೀರ್ತಿ [ಅದೇ, ೬೧, ೧೦೨೪], ದೇವಚಂದ್ರರಿಷಿ [ಅದೇ, ೧೬೯. ೧೧೧೯. ಐಹೊಳೆ], ದೇವಣಂದಿ ಭಟ್ಟಾರಕ [ಸೌ.ಇ.ಇ.೧೮, ೭೧-೧೦೬೬. ಮೋಟೆಬೆನ್ನೂರ], ನಂದಿಪಂಡಿತದೇವ [ಸೌ.ಇ.ಇ. ೨೦, ೪೬.೧೦೭೨], ನಂದಿ ಭಟ್ಟಾರಕ [ಅದೇ, ಮತ್ತು ಅದೇ, ೫೨.೧೦೭೭], ನಯಕೀರ್ತಿ ಸಿದ್ಧಾಂತದೇವನ್[ಸೌ.ಇ.ಇ. ೧೫, ೪೭. ೧೧೫೧], ನಯಸೇನ [ಎ.ಇ.೧೬, ೯.೧೦೫೩. ಮುಳ್ಗುಂದ], ನಯಸೇನಸೂರಿ [ಎ.ಇ.೧೬, ೫೫- ೧೮. ೧೦೫೩], ನರೇಂದ್ರ ಸೇನ

[ಎ.ಇ.೧೬–೯–ಬಿ. ೧೦೮೧], ನರೇಂದ್ರಣಂದಿ ಮುನೀಂದ್ರ [ಸೌ.ಇ.ಇ. ೧೮, ೭೧. ೧೦೬೬], ನಾಗಸೇನ ಪಂಡಿತ [ಎ.ಇ. ೧೭. ೧೦. ೧೦೪೭. ಅರಸಿಬೀದಿ], ನಿರವದ್ಯ ಕೀರ್ತಿ ಭಟ್ಟಾರಕ [ಸೌ.ಇ.ಇ. ೧೧–೧,೭೮. ೧೦೪೫], ನೇಮಿಚಂದ್ರ ಪಂಡಿತದೇವ [ಸು.ಇ.ಇ. ೧೫, ೪೭. ೧೧೫೧], ಪದ್ಮನಂದಿ ಸಿದ್ಧಾಂತಿದೇವ [ಸೌ.ಇ.ಇ. ೯–೧, ೨೨೧], ಹಾಗೂ ಪಾರ್ಶ್ವದೇವ ಸ್ವಾಮಿ [ಸೌ.ಇ.ಇ. ೧೧–೧, ೭೮. ೧೦೪೫],– ಮೊದಲಾದವರು ಸಮ್ಯಕ್ತ್ವರತ್ನಾಕರರಾಗಿ ಸ್ಯಾದ್ವಾದ ಸಿದ್ಧಾಂತದ ಸಾರವನ್ನು ಸಮಾಜದಲ್ಲಿ ಬೋಧಿಸಿದರು.

೧೧. ಬಾಲಚಂದ್ರ ಸಿದ್ಧಾಂತದೇವ [ಸೌ.ಇ.ಇ. ೧೧–೨, ೨೦೯. ೧೧೧೦], ಬಾಹುಬಲಿ ಭಟ್ಟಾರಕ [ಅದೇ, ೧೨೩. ೧೦೮೦], ಬಾಳಚಂದ್ರ ಬ್ರತೀಂದ್ರ [ಸೌ.ಇ.ಇ. ೧೮, ೧೦೯. ೧೧೧೨], ಭಾನುಕೀರ್ತಿ ಸಿದ್ಧಾಂತೇಶ ೧೧೯೦–೧೧೮೫ [ಎ.ಕ. ೮–೨(೧೯೦೨) ಸೊರಬ. ೨೩೩. ಉದ್ಧರೆ. ೧೧೩೯; ಅದೇ, ಸೊರಬ ೩೪೫, ೧೧೭೧.; ಅದೇ ಸೊರಬ ೩೮೪.೧೧೭೭–೭೮; ಸೌ.ಇ.ಇ. ೧೫,೫೬೮. ೧೨ ಶ], ಭಾಸ್ಕರ ನಂದಿ ಪಂಡಿತದೇವ [ಸೌ.ಇ.ಇ. ೧೧–೧, ೧೧೩. ೧೦೭೪ ಮತ್ತು ಸೌ.ಇ.ಇ. ೨೦, ೫೨. ೧೦೭೭], ಮಾಧಚಂದ್ರ ಬ್ರತೀಂದ್ರ [ಸೌ.ಇ.ಇ. ೧೧–೧, ೭೮. ೧೦೪೫], ಮುನಿಚಂದ್ರ ತ್ರೈವಿದ್ಯ ಭಟ್ಟಾರಕ [ಸೌ.ಇ.ಇ. ೧೧, ೧೪೦. ೧೦೯೭. ದೋಣಿ]– ಮೊದಲಾದವರು ಜೈನ ತಪೋರಾಜ್ಯದ ಉನ್ನತಿಯನ್ನು ಲೋಕಕ್ಕೆ ಪ್ರತ್ಯಕ್ಷವಾಗಿ ತೋರಿಸಿದರು .

೧೨. ರವಿಕೀರ್ತಿ[ಸೌ.ಇ.ಇ. ೧೧–೧, ೭೮. ೧೦೪೫], ರಾಮಣಂದಿ [ಎ.ಕ.೮, ಸೊರಬ ೨೩೩. ೧೧೩೩.; ಸೌ.ಇ.ಇ. ೧೮,: ೧೮೦. ನದಿಹರಳಹಳ್ಳಿ], ರಾಮಸೇನ ಪಂಡಿತ [ಸಿ. ೭–೧ (೧೯೦೨ ಶಿಕಾರಿಪುರ. ೨೨೪.೧೦ ಬಳ್ಳಿಗಾವೆ] ವರ್ಧಮಾನ ಮುನೀಂದ್ರ [ಸೌ.ಇ.ಇ. ೧೮, ೧೦೯. ೧೧೧೨], ವಿಮುಕ್ತ ವ್ರತೀಂದ್ರರ್ [ಸೌ.ಇ.ಇ. ೧೧–೧, ೬೧. ೧೦೨೪], ವಾಸುಪೂಜ್ಯಮುನೀಂದ್ರ [ಸೌ.ಇ.ಇ. ೧೮, ೧೮೦. ೧೧೬೮.]– ಮೊದಲಾದ ರಿಷಿ ಮುನಿಗಳು, ತಮ್ಮ ಅಗಾಧ ತಿಳಿವಳಿಕೆಯಿಂದಲೂ, ಉದಾತ್ತ ನಡೆವಳಿಕೆ ಯಿಂದಲೂ ಲೋಕವಂದಿತರಾದರು.

೧೩. ಶ್ರೀನಂದಿ ಪಂಡಿತ [ಸೌ.ಇ.ಇ. ೨೦, ೫೨. ೧೦೭೭; ಅದೇ ೧೧-೧. ೧೧೩. ೧೦೭೪] ಶಾಂತಿದೇವ ಶಬ್ದ ಚತುಮುರ್ಖ [ಎ.ಕ.೧೧ (ಪ.). ಶ್ರಬೆ. ೭೭ (೬೭) ೧೧೨೯], ಶಾಂತಿಣಂದಿ ಮುನಿಂದ್ರ [ಸೌ.ಇ.ಇ. ೧೮, ೭೧.೧೦೬೬. ಮೋಟೆಬೆನ್ನೂರ], ಶಾಂತಿರಾಶಿಪಂಡಿತ [ಸೌ.ಇ.ಇ. ೧೧-೧, ೧೦೦. ೧೦೬೪], ಸಕಳಸ್ಚಂದ್ರ ಪಂಡಿತ [ಎ.ಕ. ೮, ನಗರ ೫೮. ೧೦೬೨], ಸರ್ವಣಂದಿ ಭಟ್ಟಾರಕ [ಎ.ಕ. ೭(೧೯೦೨ ಏ ಶಿಕಾರಿಪುರ. ೧೩೬. ೧೦೬೮), ಸಿದ್ಧಣಂದಿ ಪಂಡಿತದೇವ [ಸೌ.ಇ.ಇ. ೧೮, ೭೧. ೧೦೬೬], ಹರಿಣಂದಿ ದೇವ ಆಚಾರ್ಯ [ಅದೇ, ೧೫೧. ೧೧೪೮]. ಹುಲಿಯಬ್ಬೆ ಅಜ್ಜಿಕೆ [ಸೌ.ಇ.ಇ. ೧೧-೧, ೧೧೧. ೧೦೭೧. ಸೊರಟೂರ]- ಮೊದಲಾದ ಆಚಾರ್ಯರು ತೀರ್ಥಂಕರ ಪ್ರಣೀತ ಅಹಿಂಸಾಧರ್ಮವನ್ನೂ, ಸನ್ಮತಿಸಾಹಿತ್ಯ ಸುಧೆಯನ್ನೂ ಸಮಾಜಕ್ಕೆ ಮುಟ್ಟಿಸಿದರು

ಶಾಸನಗಳಲ್ಲಿ ಈ ರಿಷಿ ಕಂತಿಯರನ್ನು ಕುರಿತು ಉಪಲಬ್ಧವಿರುವ ಸಮೃದ್ಧ ಮಾಹಿತಿಯ ವಿದ್ವಸ್ತ್ತ ಪೂರ್ಣವಾದ ಒಂದು ಪ್ರತ್ಯೇಕ ಸ್ವತಂತ್ರ ಉದ್ಗ್ರಂಥಕ್ಕೆ ಆಗುವಷ್ಟಿದೆ. ನಾಡಿನ ಸಾಂಸ್ಕೃತಿಕ ಧಾರ್ಮಿಕ ಪರಂಪರೆಯ ಮುಖ್ಯ ವಾಹಿನಿ ಜೀವಂತವಾಗಿ ಮುಂದೆ ಪ್ರವಹಿಸಲು ಈ ಯತಿ ಪುಂಗವರ ಕೊಡುಗೆ ದೊಡ್ಡದು.